# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಮತ್ತಿಕೆರೆ ಉಪವಿಭಾಗದ ವಾರ್ಡ್ ಸಂಖ್ಯೆ:36 ಮತ್ತಿಕೆರೆ**
**ಕಛೇರಿಯಲ್ಲಿ ದಿನಾಂಕ:29-12-2021 ರಂದು ನಡೆದ ಮೀಟಿಂಗ್ ನಡವಳಿಗಳು**

**ವಿಷಯ :** ಪಾಲಿಕೆ ಎಲ್ಲಾ ವಾರ್ಡ್‌ಗಳಲ್ಲಿ "Ward Decentralized Triage and Emergency Response (DETER) " Committee for Covid-19 Management (WDC) ರಚಿಸುವ ಕುರಿತು.

**ಉಲ್ಲೇಖ :** 1. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಕಛೇರಿ ಆದೇಶದ ಸಂಖ್ಯೆ ಬಿ12(5)ಪಿ.ಆರ್/35/20-21, ದಿನಾಂಕ : 16.04.2021

2. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ನಂ.RD 158 TNR 2020, ದಿನಾಂಕ :07-05-2021

3. ಈ ಕಛೇರಿಯ ಸಭಾ ಸೂಚನೆ ಪತ್ರದ ದಿನಾಂಕ :28-12-2021

---

ಉಲ್ಲೇಖ (1)ರ ಸಭಾ ಸೂಚನಾ ಪತ್ರದ ಅನುಸಾರ ಉಲ್ಲೇಖ (2) ರ ಆದೇಶದ ಅಂಶಗಳನ್ನು ಪರಿಶೀಲಿಸಲು ದಿನಾಂಕ: ರಂದು ಮತ್ತಿಕೆರೆ ವಾರ್ಡ್ ನಂ.36ರ ಕಾರ್ಯಾಲಯದಲ್ಲಿ ವಾರ್ಡ್ ಕಮಿಟಿ ಸಮಿತಿ ಸಭೆಯನ್ನು ಉಲ್ಲೇಖ ಪತ್ರ (3) ರಂತೆ ಬೆಳಗ್ಗೆ 11-30 ಗಂಟೆಗೆ ಕರೆಯಲಾಗಿದ್ದು, ಸದರಿ ಸಭೆಯ ನಡವಳಿಗಳು.

ಸದಸ್ಯರು ಕಾರ್ಯದರ್ಶಿಗಳು ಕಮಿಟಿ ಹಾಗೂ ಸಹಾಯಕ ಅಭಿಯಂತರರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿದರು.

1. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಕಸ ವಿಂಗಡನೆಗೆ ಸಂಬಂಧಿಸಿದಂತೆ, **ಘನತ್ಯಾಜ್ಯ ನಿರ್ವಹಣೆ ಇಲಾಖೆ** ಅಧಿಕಾರಿಗಳು ಮಾತನಾಡಿ, ಕಸ ವಿಂಗಡನೆ ಮಾಡಲು ಸರ್ಕಾರದಿಂದಲೇ ಆದೇಶವಿದ್ದು, ಕಸ ವಿಂಗಡನೆ ಮಾಡುವ ಕ್ರಮವನ್ನು ಆಟೋದಲ್ಲಿ ಪ್ರಚಾರಪಡಿಸುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

2. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಆರ್.ಕೆ. ಗಾರ್ಡನ್‌ನಲ್ಲಿ ವಾಸಿಸುತ್ತಿರುವ ಸ್ಥಳೀಯರು ಮಾತನಾಡಿ ಆರ್.ಕೆ. ಗಾರ್ಡನ್ ಜಂಕ್ಷನ್‌ನಲ್ಲಿ ಸಿಗ್ನಲ್ ಅಳವಡಿಸಲು ಸದಾಶಿವನಗರ ಟ್ರಾಫಿಕ್ ಸೆಲ್‌ರವರೊಂದಿಗೆ ಸಭೆಯಲ್ಲಿ ಚರ್ಚಿಸಲಾಯಿತು.

3. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ 1ನೇ ಮುಖ್ಯರಸ್ತೆ, ತ್ರಿವೇಣಿ ರಸ್ತೆಯ ಎರಡು ಬದಿಗಳಲ್ಲಿ ವ್ಯಾಪಾರ ಮಾಡುತ್ತಿದ್ದು, ಇಲ್ಲಿ ಬರುವ ಗ್ರಾಹಕರು ವಾಹನಗಳನ್ನು ನಿಲ್ಲಿಸಿ, ಸಾರ್ವಜನಿಕರು ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆವುಂಟು ಮಾಡುತ್ತಿರುತ್ತಾರೆ. ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಟ್ರಾಫಿಕ್ ಸೆಲ್ ರವರಿಗೆ ಸಭೆಯಲ್ಲಿ ತಿಳಿಸಲಾಯಿತು.

4. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಪೈಪ್‌ಲೈನ್ ರಸ್ತೆಯ ಎರಡು ಬದಿಗಳಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದರಿಂದ ವಾಹನ ಸವಾರರು ಹಾಗೂ ಪಾದಚಾರಿಗಳ ಓಡಾಟಕ್ಕೆ ತೊಂದರೆವುಂಟಾಗುತ್ತಿರುತ್ತದೆ ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಟ್ರಾಫಿಕ್ ಸೆಲ್ ರವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಲಾಯಿತು.

ಮು.ತಿ.ನೋ

5. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಎ.ಕೆ. ಕಾಲೋನಿ, ಜಯರಾಮ ಕಾಲೋನಿ ಮತ್ತು ಅಶ್ವಿನಿ ಸ್ಕೂಲ್ ಹತ್ತಿರ ಗುಂಪು ಗುಂಪಾಗಿ ಸಾರ್ವಜನಿಕರು ಸೇರುತ್ತಿದ್ದು, ಈ ಬಗ್ಗೆ ಕ್ರಮ ಕೈಗೊಳ್ಳಲು ಯಶವಂತಪುರ ಪೊಲೀಸ್ ಠಾಣೆ, ಕಾನೂನು ಮತ್ತು ಸುವ್ಯವಸ್ಥೆ ರವರು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಲಾಯಿತು.

6. ವಾರ್ಡ್ ಸಂಖ್ಯೆ: 36, ಮತ್ತಿಕೆರೆ ವ್ಯಾಪ್ತಿಯ ಹೆಚ್.ಎಂ.ಟಿ. ಮುಖ್ಯರಸ್ತೆಯಲ್ಲಿ 25 ಬೀದಿ ದೀಪಗಳು ಕಾರ್ಯನಿರ್ವಹಿಸದೇ ಇರುವುದರಿಂದ ಬೀದಿ ದೀಪಗಳು ವಿಭಾಗದ ಅಧಿಕಾರಿಗಳಿಗೆ, ಈ ಬಗ್ಗೆ ಕ್ರಮ ಕೈಗೊಳ್ಳಲು ಅಧ್ಯಕ್ಷರು ಸಭೆಯಲ್ಲಿ ತಿಳಿಸಿದರು.

ಈ ಎಲ್ಲಾ ಕ್ರಮಗಳನ್ನು ತ್ವರಿತವಾಗಿ, ಆದ್ಯತೆ ಮೇಲೆ ಕೈಗೊಂಡು ಮುಂಬರುವ ಸಭೆಯಲ್ಲಿ ಮಂಡಿಸಲು ಸೂಚಿಸಿ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಂದನೆಗಳೊಂದಿಗೆ,

Sushma W

(ಸುಷ್ಮಾ)
ಸದಸ್ಯ ಕಾರ್ಯದರ್ಶಿ,
ಹಾಗೂ ಸಹಾಯಕ ಅಭಿಯಂತರರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(ಜೆ.ಬಿ.ಶ್ರೀಧರ್ ಮೂರ್ತಿ)).
ಅಧ್ಯಕ್ಷರು,
ವಾರ್ಡ್ ಸಂಖ್ಯೆ:36, ಮತ್ತಿಕೆರೆ.